ಸಂದುಹೋದವು. ಆತಿಥ್ಯ ನೀಡಿ ನಮ್ಮನ್ನು ಖುಷಿಪಡಿಸಿರುವ ನಿನಗೆ ಪ್ರತಿಫಲ ಕೊಡದೆ ಬಿಡಬಾರದು. ನೀನು ಮಾಯಾ ಸರೋವರ ಹುಡುಕಿಕೊಂಡು ಹೊರಟಿರುವೆ ಎಂಬುದು ನಮಗೆ ತಿಳಿದಿದೆ. ನಾವು ನಿನಗೆ ಸಹಾಯ ಮಾಡಬಹುದೇ?' ಎಂದು ಕೇಳಿದವು.

ಗೋಮಿನಿ ಸಂತೋಷದಿಂದ, 'ಹೌದು, ನನ್ನ ಪ್ರಯಾಣದ ಉದ್ದೇಶ ನಿಮಗೆ ಅರ್ಥವಾಗಿದೆ. ಸರೋವರವನ್ನು ಸೇರಲು ನನಗೆ ನೆರವು ನೀಡಿ' ಎಂದು ಕೇಳಿಕೊಂಡಳು.

ಆಗ ಗಿಣಿಗಳ ರಾಜ ತನ್ನ ಮೈಯನ್ನು ಉಜ್ಜಿ ಮೂರು ಗರಿಗಳನ್ನು ಉದುರಿಸಿತು. ಅದನ್ನು ಅವಳಿಗೆ ಕೊಟ್ಟಿತು. 'ಈ ಗರಿಗಳನ್ನು ಬೀಸಣಿಕೆಯ ಹಾಗೆ ಜೋಡಿಸಿ ಕಟ್ಟಿಕೊಳ್ಳಬೇಕು. ಬೀಸಣಿಕೆಯನ್ನು ಕೈಯಲ್ಲಿ ಹಿಡಿದರೆ ಇದರಿಂದ ತೀವ್ರವಾದ ಗಾಳಿ ಬೀಸುತ್ತದೆ. ಇದು ಆಕಾಶ ಮಾರ್ಗದಲ್ಲಿ ನಿನ್ನನ್ನು ಮಾಯಾ ಸರೋವರದ ತೀರಕ್ಕೆ ಕರೆದುಕೊಂಡು ಹೋಗಿ ಕೆಳಗಿಳಿಸುತ್ತದೆ' ಎಂದು ಹೇಳಿತು. ಗೋಮಿನಿ ಗರಿಗಳನ್ನು ಜೋಡಿಸಿ ತನ್ನ ತಲೆಗೂದಲಿನಿಂದ ಕಟ್ಟಿ ಬೀಸಣಿಕೆಯನ್ನು ತಯಾರಿಸಿದಳು. ಅದನ್ನು ಕೈಯಲ್ಲಿ ಹಿಡಿದೊಡನೆಯೇ ಅದು ಗಿರಗಿರನೆ ತಿರುಗತೊಡಗಿತು. ಅದರಿಂದ ಎದ್ದ ಗಾಳಿಯು ಅವಳನ್ನು ಆಕಾಶಕ್ಕೇರಿಸಿ, ಭೂಮಿಯ ಕೊನೆಯ ಅಂಚಿಗೆ ತಲುಪಿಸಿತು. ಸನಿಹದಲ್ಲೇ ಮಾಯಾ ಸರೋವರವನ್ನು ಕಂಡು ಅವಳಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಆದರೆ ಅವಳ ಕಾಲುಗಳ ಬಳಿ ಒಂದು ದೈತ್ಯ ಆಕಾರದ ಚೇಳು ಕೊಂಡಿಯನ್ನು ಎತ್ತಿ ಅವಳಿಗೆ ಕುಟುಕಲು ಹೊಂಚು ಹಾಕಿತ್ತು.

ಗೋಮಿನಿ ಧೈರ್ಯದಿಂದ ತನ್ನ ಬೀಸಣಿಕೆಯನ್ನು ಎತ್ತಿ ಚೇಳಿಗೆ ಎದುರಾಗಿ ಹಿಡಿದಳು. ಅದರಿಂದ ಬೀಸುತ್ತಿದ್ದ ವೇಗವಾದ ಗಾಳಿಯು ಚೇಳನ್ನು ಹರದಾರಿ ದೂರಕ್ಕೆ ತೆಗೆದುಕೊಂಡು ಹೋಗಿ ಎಸೆಯಿತು. ಸರೋವರದ ಬಳಿ ಬೆಳಗಾಗುವುದನ್ನೇ ಕಾದು ಕುಳಿತಳು. ಬೆಳಕು ಹರಿಯುವಾಗ ಆಕಾಶವು ನಿಧಾನವಾಗಿ ಸರೋವರದ ಕಡೆಗೆ ಇಳಿದು ಬರತೊಡಗಿತು. ಆದರೆ ಅದೇ ವೇಳೆಗೆ ರಾಕ್ಷಸ ಇರುವೆಗಳ ದೊಡ್ಡ ದಂಡು ಅವಳತ್ತ ನುಗ್ಗಿತು. ಅವಳ ಮೈಯ ಮೇಲೇರಿ ಕಡಿಯುವುದಕ್ಕೆ ಸಿದ್ಧವಾದವು. ಅವಳು ಅದಕ್ಕೂ ಬೆದರದೆ ಗರಿಗಳ ಬೀಸಣಿಕೆಯಿಂದ ಗಾಳಿ ಬರುವಂತೆ ಮಾಡಿದಳು. ಇರುವೆಗಳು ಗಾಳಿಯಲ್ಲಿ ಹಾರಿಹೋದವು. ಆಕಾಶವು ಬಂದು ಸರೋವರದ ನೀರಿಗೆ ಮುತ್ತಿಟ್ಟಿತು. ಅದೇ ಹೊತ್ತಿನಲ್ಲಿ ಅವಳು ಒಂದು ಶೀಸೆಯಲ್ಲಿ ಅದರ ನೀರನ್ನು ತುಂಬಿಸಿದಳು. ಬೀಸಣಿಕೆಯ ಸಹಾಯದಿಂದ ಸುರಕ್ಷಿತವಾಗಿ ರಾಜನ ಕೋಟೆಯ ಬಳಿಗೆ ಬಂದು ಕೆಳಗಿಳಿದಳು.

ಆದರೆ ಕೋಟೆಯ ಬಾಗಿಲು ಕಾಯುವವನು ಒಳಗೆ ಹೋಗಲು ಬಿಡಲಿಲ್ಲ. ಗೋಮಿನಿ ಬೀಸಣಿಕೆ ಹಿಡಿದು ಕೋಟೆಯ ಮೇಲೆ ಹಾರುತ್ತ ನೇರವಾಗಿ ರಾಜನ ಆಸ್ಥಾನಕ್ಕೆ ಹೋದಳು. ಸರೋವರದ ನೀರನ್ನು ತಂದಿರುವುದಾಗಿ ಹೇಳಿ ರಾಜನಿಗೆ ಒಪ್ಪಿಸಿದಳು. ರಾಜವೈದ್ಯನು ನೀರನ್ನು ಪರೀಕ್ಷಿಸಿದ. ಸಂತೋಷದಿಂದ ಕುಣಿದಾಡಿದ. 'ಮಹಾರಾಜ, ನಾನು ಹೇಳಿದ ಮಾಯಾ ಸರೋವರದ ನೀರು ಇದೆಂಬುದರಲ್ಲಿ ಅನುಮಾನವಿಲ್ಲ' ಎನ್ನುತ್ತ ಯುವರಾಜನಿಗೆ ಅದರಿಂದ ಚಿಕಿತ್ಸೆ ಮಾಡಿದ. ಅವನು ಹೇಳಿದಂತೆಯೇ ಯುವರಾಜನು ಆರೋಗ್ಯವಂತನಾದ.

ರಾಜನಿಗೆ ಸಂತೋಷವಾಯಿತು. 'ಬದುಕಿನ ಆಸೆ ಕಳೆದುಕೊಂಡಿದ್ದ ನನ್ನ ಮಗನ ಜೀವ ಉಳಿಸಿರುವ ನಿನ್ನನ್ನು ನನ್ನ ಸೊಸೆಯಾಗಿ ಸ್ವೀಕರಿಸಲು ನನಗೆ ಆಶೆಯಾಗಿದೆ. ಇದಕ್ಕೆ ಒಪ್ಪಿಗೆಯಿದೆಯೇ?' ಎಂದು ಕೇಳಿದ. ಅವಳು, 'ಇಲ್ಲ, ನನಗೆ ನನ್ನ ಸುಖ ಮುಖ್ಯವಲ್ಲ. ಮೂರು ಆಶೆಗಳು ಈಡೇರಬೇಕೆಂದು ಬಯಸುತ್ತೇನೆ. ನನ್ನ ಇಬ್ಬರು ಸಹೋದರರು ನಿಮ್ಮ ಸೆರೆಮನೆಯಲ್ಲಿದ್ದಾರೆ, ಅವರನ್ನು ಬಂಧ ವಿಮುಕ್ತಿಗೊಳಿಸಿ. ನನಗೆ ನೆರವು ನೀಡಿದ ಗಿಣಿಗಳು ಕೊಟ್ಟ ಗರಿಗಳನ್ನು ಮರಳಿ ಅವುಗಳಿಗೆ ಕಳುಹಿಸಲು ಅವಕಾಶ ನೀಡಿ. ಹಾಗೆಯೇ ದಿನವೂ ಜೋಳದ ಕಾಳುಗಳನ್ನು ಗಿಣಿಗಳಿಗೆ ಹಂಚಲು ಅವಕಾಶ ಒದಗಿಸಿ' ಎಂದು ಗೋಮಿನಿ ಬೇಡಿಕೊಂಡಳು.

'ನಿನ್ನ ಅಪೇಕ್ಷೆಗಳೆಲ್ಲವನ್ನೂ ನೆರವೇರಿಸುತ್ತೇನೆ' ಎಂದು ಹೇಳಿ ರಾಜನು ಅವಳಿಗೆ ತನ್ನ ಮಗನ ಜೊತೆಯಲ್ಲಿ ವೈಭವದಿಂದ ಮದುವೆ ಮಾಡಿಸಿದ. ■



ಗಣೇಶ ಆರಳಿಕಟ್ಟೆ

# ಹಕ್ಕಿಯ ಆಸೆ

■ **ಅರುಣಾ ಜಿ. ಭಟ್ ಬದಿಕೋಡಿ**

ಕಪ್ಪು ಬಣ್ಣದ ಪುಟ್ಟ ಹಕ್ಕಿಗೆ
ಆಸೆಯೊಂದು ಹುಟ್ಟಿತು
ಚಂದದ ಬಣ್ಣವು ಬೇಕೆಂದು
ಒಂದೇ ಸಮನೆ ಯೋಚಿಸಿತು

ಚಿಣ್ಣರ ಶಾಲೆಯ ಗೋಡೆಯಲಿ
ಬಿಡಿಸುತಲಿದ್ದರು ಚಿತ್ರವನು
ಡಬ್ಬಗಳಲ್ಲಿ ಕರಗಿಸಿದ್ದರು
ಬಗೆ ಬಗೆ ಬಣ್ಣಗಳನ್ನು

ಯಾರೂ ಇರದ ಸಮಯವ ನೋಡಿ
ಹಕ್ಕಿಯು ಹಾರಿತು ಡಬ್ಬದ ಬಳಿಗೆ
ಕಳ್ಳನ ಹಾಗೇ ಸುತ್ತಲೂ ನೋಡಿ
ಇಳಿಯಿತು ಡಬ್ಬದ ಒಳಗೆ

ಬಣ್ಣವು ಅಂಟಿತು ರೆಕ್ಕೆಗೆ
ಕಪ್ಪನೆ ಬಣ್ಣವು ಮಾಸಿತು
ವಿಚಿತ್ರ ರೂಪವ ತಾಳಿತು
ಹಕ್ಕಿಯು ಹರುಷದಿ ಹಿಗ್ಗಿತು

ಹಾರುತ ಬಂದ ಹಕ್ಕಿಯ ಕಂಡು
ಗಲಿಬಿಲಿ ಗೊಂಡವು ಹಕ್ಕಿಗಳು
ಕಾಡಲು ಬಂದ ವೈರಿಯೆಂದು
ಜೊತೆಯಲಿ ಬಂದು ಕುಕ್ಕಿದವು

ಜೀವದ ಭಯದಲ್ಲಿ ಹಾರಿತು ಹಕ್ಕಿ
ದೂರದಿ ಕುಳಿತು ಅತ್ತಿತು ಬಿಕ್ಕಿ ಬಿಕ್ಕಿ
ದೇವರು ಕೊಟ್ಟ ಬಣ್ಣವೇ ಸಾಕೆನ್ನುತ
ಹಾರಿತು ಹೊಳೆಯನು ಹುಡುಕಿ ■